ಚಿಣ್ಣರ ಚಿತ್ತಾರ

ಪಂಚತಂತ್ರ ಕಥೆ

ಒಗ್ಗಟ್ಟಿನಲ್ಲಿ ಬಲವಿದೆ

ಒಂದು ದೊಡ್ಡ ಮರದಲ್ಲಿ ಅನೇಕ ಪಾರಿವಾಳಗಳು ಇದ್ದವು. ಆ ಮರದಲ್ಲಿ ವಾಸಿಸುವ ಕಾಗೆಯೊಂದು ಬಂದು ಬೇಡನೊಬ್ಬ ಬಲೆಯೊಂದಿಗೆ ಬರುತ್ತಿರುವ ನೆಂದು ಎಚ್ಚರಿಕೆ ಕೊಟ್ಟಿತು. ಅದರಂತೆಯೇ ಬೇಡನು ಬಂದು, ಬಲೆಯನ್ನು ಹಾಸಿ ಅಕ್ಕಿಕಾಳುಗಳನ್ನು ಎಸೆದನು. ಎಚ್ಚರಿಕೆಯನ್ನು ನಿರ್ಲಕ್ಷಿಸಿದ ಕೆಲವು ಪಾರಿವಾಳಗಳು ಅಕ್ಕಿಕಾಳುಗಳ ಆಸೆಯಿಂದ ಬಲೆಗೆ ಬಿದ್ದವು.

ಆಗ ಚಿತ್ರಗ್ರೀವನೆಂಬ ಪಾರಿವಾಳಗಳ ದೊರೆಯು ಇತರ ಪಾರಿವಾಳಗಳಿಗೆ ಧೈರ್ಯ ಹೇಳಿತು. ಅದರ ಅಪ್ಪಣೆಯಂತೆ ಅವೆಲ್ಲವೂ ಬಲೆಯನ್ನೇ ಎತ್ತಿಕೊಂಡು ಹಾರಿಬಿಟ್ಟವು. ಪಾರಿವಾಳಗಳು ಬಲೆಯನ್ನೇ ಎತ್ತಿಕೊಂಡು ಹಾರುವುದನ್ನು ಕಂಡು, ಬೇಡನು ಹೌಹಾರಿದನು. ಬಲೆಯ ಹಿಂದೆಯೇ ಓಡುತ್ತ ಓಡುತ್ತ ಬಂದನು.

ಬಹಳ ದೂರ ಓಡಿದ ಬೇಡನಿಗೆ ನಿರಾಶೆಯಾಯಿತು. ಅವನು ನಿಟ್ಟುಸಿರು ಬಿಡುತ್ತ ಹಿಂತಿರುಗಿದನು. ಬೇಡನು ಹೋದನಂತರ ಚಿತ್ರಗ್ರೀವವು ತನ್ನ ಪ್ರಜೆಗಳಿಗೆ, ಈಶಾನ್ಯ ದಿಕ್ಕಿಗೆ ಹಾರಲು ಹೇಳಿತು. ಅಲ್ಲಿ ಹಿರಣ್ಯಕನೆಂಬ ಒಂದು ಇಲಿ ಇದೆ, ಅದು ಬಲೆಯನ್ನು ಚೂರು ಚೂರು ಮಾಡುತ್ತದೆ ಎಂದು ಆಶ್ವಾಸನೆ ಕೊಟ್ಟಿತು.

ಪಾರಿವಾಳಗಳೆಲ್ಲವೂ ಹಿರಣ್ಯಕನೆಂಬ ಇಲಿಯ ಬಿಲದ ಹತ್ತಿರ ಇಳಿದವು. ಪಾರಿವಾಳಗಳ ದೊರೆಯು ಬಲೆಯನ್ನು ಕಡಿದು, ಪಾರಿವಾಳಗಳನ್ನು ಬಿಡುಗಡೆ ಮಾಡುವಂತೆ ಇಲಿಯನ್ನು ಕೇಳಿಕೊಂಡಿತು. ಈ ಇಲಿಗೆ ಹಿಂದೆ ಚಿತ್ರಗ್ರೀವ ಯಾವಾಗಲೋ ಸಹಾಯ ಮಾಡಿತ್ತು. ಅದಕ್ಕೆ ಪ್ರತ್ಯುಪಕಾರ ಮಾಡಲು ಹಿರಣ್ಯಕವೆಂಬ ಇಲಿ ಬಲೆಯನ್ನು ತನ್ನ ಹರಿತವಾದ ಹಲ್ಲುಗಳಿಂದ ಬಲೆಯನ್ನು ಚೂರು ಚೂರು ಮಾಡಿತು.

ಎಲ್ಲ ಪಾರಿವಾಳಗಳನ್ನೂ ಬಂಧನದಿಂದ ಬಿಡಿಸಿದ ಮೇಲೆ ಇಲಿ ಹೇಳಿತು: "ಗೆಳೆಯಾ, ಇನ್ನು ಮೇಲೆ ಎಂದಾದರೂ ವಿಪತ್ತು ಒದಗಿದರೆ ತಪ್ಪದೆ ನನ್ನ ಬಳಿಗೆ ಬಾ. ಸದಾ ನಾನು ನಿನ್ನ ಸಹಾಯಕ್ಕೆ ಸಿದ್ಧನಿರುವೆ"

ಯಾವಾಗಲೂ ನಾವು ಹಿರಿಯರ ಎಚ್ಚರಿಕೆಯ ಮಾತುಗಳನ್ನು ಕೇಳಬೇಕು. ವಿಪತ್ತುಗಳಿಂದ ಪಾರಾಗಬೇಕು. ಆದರೂ ವಿಪತ್ತು ಬಂದರೆ, ಅದರಿಂದ ಪಾರಾಗುವ ಉಪಾಯವನ್ನೂ ಕಂಡುಹಿಡಿದುಕೊಳ್ಳಬೇಕು.

ಸಂಸ್ಕೃತಿ ಪರಿಚಯ
ಮಹಾಭಾರತ

ಮಹಾಭಾರತವು ಪ್ರಪಂಚದ ಇತಿಹಾಸದಲ್ಲಿಯೇ ಅತಿ ದೊಡ್ಡ ಗ್ರಂಥ. ಸುಮಾರು ಒಂದು ಲಕ್ಷ ಶ್ಲೋಕಗಳಿರುವ ಈ ಗ್ರಂಥ ಭಾರತೀಯರ ಲೌಕಿಕ ಮತ್ತು ಧಾರ್ಮಿಕ ಪರಂಪರೆಯ ನಿಜವಾದ ಭಂಡಾರವಾಗಿದೆ. ಇದರಂತೆ ಭಾರತೀಯ ಜನತೆಯ ಮನಸ್ಸಿನ ಅಂತರಾಳವನ್ನು ತೋರಿಸಿಕೊಡುವ ಗ್ರಂಥ ಇನ್ನೊಂದಿಲ್ಲ ಎನ್ನಬಹುದು. ಒಂದೇ ವಂಶದ ಕೌರವ ಮತ್ತು ಪಾಂಡವರೆಂಬ ದಾಯಾದಿಗಳು ರಾಜ್ಯಕ್ಕಾಗಿ ಜಗಳವಾಡಿದರು. ಅವರಿಬ್ಬರ ನಡುವೆ ಘೋರ ಯುದ್ಧ ಏರ್ಪಟ್ಟತು. ಕಡೆಯಲ್ಲಿ ನ್ಯಾಯಪಕ್ಷಪಾತಿಗಳಾಗಿದ್ದ ಪಾಂಡವರಿಗೆ ವಿಜಯವಾಯಿತು. ಇದಿಷ್ಟು ಮಹಾಭಾರತದ ಕತೆಯಾದರೂ, ಅದರಲ್ಲಿ ಬರುವ ಪ್ರತಿಯೊಂದು ಪಾತ್ರವೂ ವಿಶಿಷ್ಟವಾಗಿರುವುದನ್ನು ನಾವು ಕಾಣುತ್ತೇವೆ, ಪ್ರತಿಯೊಂದು ಘಟನೆಯೂ ಸಂಕೀರ್ಣವಾಗಿದ್ದು ಅದರಲ್ಲಿ ವ್ಯಕ್ತಿಯೊಬ್ಬ ನಡೆದುಕೊಳ್ಳುವ ರೀತಿಯನ್ನು ಗಮನಿಸುತ್ತೇವೆ. ಹೀಗಾಗಿ, ಮಾನವನ ಸಾಹಸ ಕಾರ್ಯಗಳಿಗೆ ಸ್ಮಾರಕವಾದ ಜಯಗೀತೆ ಎಂದು ವಿದ್ವಾಂಸರು ಇದನ್ನು ವರ್ಣಿಸುತ್ತಾರೆ. ಇಲ್ಲಿ ಅನೇಕ ಋಷಿಗಳ, ಶ್ರೇಷ್ಠ ಸ್ತ್ರೀಯರ, ವೀರಯೋಧರ ಮತ್ತು ಮಹಾನ್ ರಾಜರ ಕಥೆಗಳನ್ನು ಕಾಣಬಹುದು. ಮಹಾಭಾರತವು ಪ್ರಾಚೀನ ಭಾರತೀಯ ಶಾಸನ, ನೀತಿ, ಸಮಾಜಶಾಸ್ತ್ರ, ರಾಜಕೀಯ–ಇವುಗಳ ಮೇಲಿನ ಸಾಗರದಷ್ಟು ಮಾಹಿತಿಗಳನ್ನು ನಮಗೆ ನೀಡುತ್ತದೆ.

ಭಾರತೀಯ ಶಾಸ್ತ್ರಗಳಲ್ಲಿ **ಧರ್ಮ, ಅರ್ಥ, ಕಾಮ, ಮೋಕ್ಷ**ಗಳೆಂಬ ಪುರುಷಾರ್ಥಗಳನ್ನು ವರ್ಣಿಸಿದ್ದಾರೆ. ಧರ್ಮಕ್ಕೆ ಅನುಗುಣವಾಗಿ, ಧನ ಸಂಪಾದನೆ ಮಾಡುತ್ತ, ಆಸೆಗಳನ್ನು ತೀರಿಸಿಕೊಳ್ಳಬೇಕು. ಆದರೆ ಎಲ್ಲಕ್ಕಿಂತ ಶ್ರೇಷ್ಠವಾದ ಮೋಕ್ಷವೇ ಗುರಿಯಾಗಬೇಕು. ಈ ಸಿದ್ಧಾಂತವನ್ನು ಅನೇಕ ನಿದರ್ಶನಗಳ ಮೂಲಕ, ಉಪದೇಶಗಳ ಮೂಲಕ ಮಹಾಭಾರತ ಪ್ರತಿಪಾದಿಸುತ್ತದೆ. **'ಧರ್ಮೋ ರಕ್ಷತಿ ರಕ್ಷಿತಃ'** – ಧರ್ಮವನ್ನು ರಕ್ಷಿಸಿದವನನ್ನು ಅದು ರಕ್ಷಿಸುತ್ತದೆ ಎಂಬ ಮಾತಿಗೆ ಮಹಾಭಾರತದ ಕತೆ ಸಾಕ್ಷಿಯಾಗಿದೆ. ಪಾಂಡವರು ಎಷ್ಟೇ ಕಷ್ಟ, ನಷ್ಟ ಒದಗಿ ಬಂದರೂ ಧರ್ಮವನ್ನು ಬಿಡಲಿಲ್ಲ. ಕಡೆಗೆ ಧರ್ಮವೇ ಅವರನ್ನು ವಿಜಯಶಾಲಿಗಳಾಗುವಂತೆ ಮಾಡಿತು. ಆದ್ದರಿಂದ ಧರ್ಮದಂತೆ, ಅಂದರೆ ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುವುದೇ ಶ್ರೇಯಸ್ಸು ಎಂದು ಮಹಾಭಾರತ ಪ್ರತಿಪಾದಿಸುತ್ತದೆ.

ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣದಿಂದ ಕಲಿಯಬೇಕಾದ ಗುಣಗಳು

ಚಾರಿತ್ರ್ಯ

ಹಿಂದೆ ಒಬ್ಬ ಬೇಟೆಗಾರನಿದ್ದನು. ಅವನು ಪ್ರತಿದಿನ ಬೇಟೆಯಾಡಿ, ಪ್ರಾಣಿಗಳ ಮಾಂಸ, ಚರ್ಮಗಳನ್ನು ಮಾರಿ ಜೀವಿಸುತ್ತಿದ್ದನು. ಒಮ್ಮೆ ಅವನು ಅರಣ್ಯಕ್ಕೆ ಹೋದನು. ಅಲ್ಲಿ ದಾರಿ ತಪ್ಪಿದನು. ಎಲ್ಲಿಂದಲೋ ಒಂದು ಹುಲಿಯ ಶಬ್ದ ಕೇಳಿಸಿತು. ಬೇಟೆಗಾರ ಒಂದು ಮರ ಹತ್ತಿ ಕುಳಿತನು. ಮರದ ಕೆಳಗೆ ಹುಲಿ ಬಂದು ನಿಂತುಕೊಂಡು, ಗರ್ಜಿಸುತ್ತಿತ್ತು.

ಆ ಮರದ ಕೊಂಬೆಯ ಮೇಲೆ ಒಂದು ಕರಡಿ ಈಗಾಗಲೇ ಕುಳಿತಿತ್ತು. ಬೇಟೆಗಾರ ನಡಗುತ್ತ ಇನ್ನೊಂದು ಕೊಂಬೆಯ ಮೇಲೆ ಕುಳಿತುಕೊಂಡನು. ಆಗ ಕರಡಿ ಅವನನ್ನು ಸಮಾಧಾನ ಪಡಿಸುತ್ತ, ಅಭಯವನ್ನು ನೀಡಿತು. "ಈಗ ನೀನು ನಿದ್ರೆ ಮಾಡು. ಮಧ್ಯರಾತ್ರಿಯ ನಂತರ ನಾನು ನಿದ್ರೆ ಮಾಡುತ್ತೇನೆ. ಆಗ ನೀನು ನನ್ನ ಕಾವಲಿರು. ಈಗ ನಾನು ನಿನ್ನ ಕಾವಲಿರುತ್ತೇನೆ" ಎಂದಿತು. ಬೇಟೆಗಾರನು ನಿಶ್ಚಿಂತೆಯಿಂದ ನಿದ್ರೆ ಮಾಡಿದನು.

ಹುಲಿ ಕರಡಿಯನ್ನು ಪುಸಲಾಯಿಸಿತು. "ಮಾನವನನ್ನು ನಂಬಬೇಡ. ಅವನನ್ನು ಕೆಳಗೆ ಬೀಳಿಸು" ಎಂದಿತು. ಆದರೆ ಕರಡಿ ಅದಕ್ಕೆ ಒಪ್ಪಲಿಲ್ಲ.

ಮಧ್ಯರಾತ್ರಿಯಾಯಿತು. ಕರಡಿ ನಿದ್ರೆ ಮಾಡುತ್ತಿತ್ತು. ಬೇಟೆಗಾರನು ಎಚ್ಚರವಾಗಿದ್ದನು. ಆಗ ಮತ್ತೆ ಹುಲಿ ಬೇಟೆಗಾರನನ್ನು ಕೂಡ ಪುಸಲಾಯಿಸಿತು. "ಕರಡಿ ನಿನ್ನ ಶತ್ರು. ಅದು ನಿನ್ನನ್ನು ಕೊಲ್ಲುತ್ತದೆ. ಅದನ್ನು ಕೆಳಗೆ ನೂಕಿಬಿಡು" ಎಂದಿತು.

ಅದರ ಮಾತುಗಳನ್ನು ಕೇಳಿ ಕೃತಘ್ನನಾದ ಬೇಟೆಗಾರನು ನಿದ್ರೆಯಲ್ಲಿದ್ದ ಕರಡಿಯನ್ನು ಕೆಳಕ್ಕೆ ನೂಕಿದನು. ಬೀಳುವ ಹೊತ್ತಿಗೆ ಕರಡಿಗೆ ಎಚ್ಚರವಾಯಿತು. ಅದು ಒಂದು ಕೊಂಬೆಯನ್ನು ಹಿಡಿದುಕೊಂಡು ಮರವನ್ನು ಹತ್ತಿ, ತನ್ನ ಮೊದಲಿನ ಜಾಗದಲ್ಲಿ ಬಂದು ಕುಳಿತುಕೊಂಡಿತು.

ಕರಡಿಯನ್ನು ಕಂಡು ಬೇಟೆಗಾರನು ಹೆದರಿಕೆಯಿಂದ ನಡುಗುತ್ತಿದ್ದನು. ಆಗ ಕರಡಿ ಹೇಳಿತು, "ಭಯಪಡಬೇಡ. ನೀನು ಕೃತಘ್ನ. ಆದರೂ ನಾನು ನಿನ್ನನ್ನು ಕೊಲ್ಲುವುದಿಲ್ಲ." ಆಗ ಹುಲಿ ಹೇಳಿತು. "ಅವನು ನಿನಗೆ ಮೋಸ ಮಾಡಿದ್ದಾನೆ. ಅವನನ್ನು ಕೆಳಗೆ ಬೀಳಿಸು." ಆದರೆ ಕರಡಿ ಸಮಾಧಾನದಿಂದ ಹೇಳಿತು, " ಸ್ನೇಹಿತ, ಅಪಕಾರ ಮಾಡಿದವರ ಮೇಲೆ ಕೋಪ ಮಾಡಿಕೊಳ್ಳುವವರು ಮೂರ್ಖರು. ಸಜ್ಜನರು ಕೋಪಿಸಿಕೊಳ್ಳುವುದಿಲ್ಲ. ಅಪಕಾರಿಗಳಿಗೂ ಉಪಕಾರ ಮಾಡುವುದೇ ನೀತಿ. ಅವನನ್ನು ನಾನು ಬೀಳಿಸುವುದಿಲ್ಲ."

ಈ ಬಗೆಯ ಸದ್ಗುಣವನ್ನೇ ಚಾರಿತ್ರ್ಯವೆಂದು ಕರೆಯುವುದು. ಶಿಕ್ಷಣವು ಚಾರಿತ್ರ್ಯವಂತ ವ್ಯಕ್ತಿಗಳನ್ನು ನಿರ್ಮಾಣ ಮಾಡಬೇಕೆಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು.

ಯೂಕ್ಲಿಡ್ ರೇಖಾಗಣಿತದ ಪಿತಾಮಹ ಎಂದು ಪ್ರಖ್ಯಾತನಾಗಿದ್ದಾನೆ. ಅವನು ಒಮ್ಮೆ ಸಿಕಂದರಿಯಾ ರಾಜ್ಯದ ರಾಜನಾದ ಟಾಲೆಮಿಗೆ ಗಣಿತದ ಪಾಠವನ್ನು ಹೇಳಿಕೊಡುತ್ತಿದ್ದನು. ರಾಜನಿಗೆ ಲೆಕ್ಕಗಳು ಸುಲಭವಾಗಿ ಅರ್ಥವಾಗಲಿಲ್ಲ. ಅವನು ಕೇಳಿದ, "ಗಣಿತವನ್ನು ಕಲಿತುಕೊಳ್ಳಲು ಇದಕ್ಕಿಂತ ಸುಲಭವಾದ ದಾರಿಯಿದೆಯೇ?"

ಈ ಮಾತನ್ನು ಕೇಳಿ ಯೂಕ್ಲಿಡ್ ನಕ್ಕುಬಿಟ್ಟ. ರಾಜನ ಮುಖವನ್ನು ನೋಡಿ ಹೇಳಿದ, "ರಾಜ–ಮಹಾರಾಜರಿಗೆ ತಿರುಗಾಡುವುದಕ್ಕೆ ಬೇರೆ ಬೇರೆ ರಾಜಮಾರ್ಗಗಳಿರುತ್ತವೆ. ನಿಜ; ಆದರೆ ವಿದ್ಯಾಭ್ಯಾಸಕ್ಕೆ ಮಾತ್ರ ಇರುವುದು ಒಂದೇ ದಾರಿ. ಎಲ್ಲರೂ ಆ ದಾರಿಯಲ್ಲೇ ಹೋಗಬೇಕು." ಎಂದ.